**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್–76ರಲ್ಲಿ ದಿನಾಂಕ: 06–04–2022 ರಂದು ನಡೆದ ವಾರ್ಡ್ ಸಮಿತಿ ಸಭೆಯ**

**ಸಭಾ ನಡವಳಿಗಳು.**

**ವಾರ್ಡ್ ಸಂಖ್ಯೆ–76 ಗಾಯತ್ರಿನಗರ** **ಸಮಯ: ಬೆಳಗ್ಗೆ : 11:00 ಘಂಟೆಗೆ**

ದಿನಾಂಕ: 06–04–2022 ರಂದು ವಾರ್ಡ್ ಸಂಖ್ಯೆ: 76ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು, ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಸತೀಶ್‌ಕುಮಾರ್.ಬಿ, ಸಹಾಯಕ ಅಭಿಯಂತರರು, ವಾರ್ಡ್–76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 2 | ಸಚ್ಚಿದಾನಂದ ಮೂರ್ತಿ, ಎ.ಎಸ್.ಐ ಟ್ರಾಫಿಕ್ ಮಲ್ಲೇಶ್ವರಂ |
| 3 | ಪವನ್‌ಕುಮಾರ್, ಬಿಡಬ್ಲ್ಯೂಎಸ್ಎಸ್‌ಬಿ |
| 4 | ಬಿ ನಾಗೇಶ್, ಹಿರಿಯ ವೆಟರ್ನರಿ ನಿರೀಕ್ಷಕರು |
| 5 | ಕನಕರಾಜು, ಕಂದಾಯ ಪರಿವೀಕ್ಷಕರು |
| 6 | ಎನ್ ರವಿಕುಮಾರ್, ಮೌಲ್ಯಮಾಪಕರು |
| 7 | ಎನ್. ಬಸವರಾಜ್, ಬಿಡಬ್ಲ್ಯೂಎಸ್ಎಸ್‌ಬಿ |
| 8 | ಶ್ರೀಮತಿ ಶಾರದ, ಹಿರಿಯ ಆರೋಗ್ಯ ಪರಿವೀಕ್ಷಕರು |
| 9 | ಶ್ರೀನಿವಾಸ್.ಬಿ ಮಾರ್ಷಿಲ್ |
| 10 | ಕೆ. ಗೋವಿಂದರಾಜು, ಸ್ಯಾನಿಟರಿ ದಫೆದಾರ್ |
| 11 | ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 12 | ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |
| 13 | ಸಾಗರ್‌ರಾಜು.ಕೆ ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 14 | ಪ್ರದೀಪ್.ಜೆ |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್–76 ಇವರು ತುರ್ತಾದ ಕೆಲಸವಿರುವುದರಿಂದ ಸಭೆಗೆ ಹಾಜರಾಗಲು ಸಾಧ್ಯವಾಗದ ಕಾರಣ ಸಹಾಯಕ ಅಭಿಯಂತರರು, ವಾರ್ಡ್–76 ರವರಿಗೆ ಸಭೆಯನ್ನು ನಡೆಸಲು ದೂರವಾಣಿ ಮುಖಾಂತರ ಸೂಚಿಸಿರುತ್ತಾರೆ.

Trafic ಇಲಾಖೆ:

- ರೈಲ್ವೆ ಸಮನಾಂತರ ರಸ್ತೆ ಬಳಿ ಪಾದಚಾರಿ ಮಾರ್ಗ ಹಾಗೂ ರಸ್ತೆಯ ಮೇಲೆ ಹಣ್ಣಿನ ಅಂಗಡಿ ಇಟ್ಟಿರುವವರನ್ನು ತೆರವುಗೊಳಿಸಲು ಬಿಬಿಎಂಪಿ ಕಾಮಗಾರಿ ಇಲಾಖೆಯೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಲು ಸೂಚಿಸಲಾಯಿತು.
- ಅಯ್ಯಪ್ಪ ದೇವಸ್ಥಾನದ ಬಳಿ, ಮೆಟ್ರೋ ಸ್ಟೇಷನ್ ಬಳಿ ಹಾಗೂ ಗಣೇಶ್ ದೇವಸ್ಥಾನದ ಬಳಿ ತುಂಬಾ ದಿನಗಳಿಂದ ನಿಲ್ಲಿಸಿರುವ ಗಾಡಿಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

BWSSB ಇಲಾಖೆ:

- ಡಿ ಬ್ಲಾಕ್‌ನಲ್ಲಿ ಪೈಪ್ ಅಳವಡಿಸುವ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲು ಸೂಚಿಸಲಾಯಿತು..
- ಮಾರುತಿನಗರ ಹಾಗೂ ಗಾಯತ್ರಿನಗರದಲ್ಲಿ ಅಳವಡಿಸಿರುವ ಪೈಪ್‌ಗಳ Leakage ತಪಾಸಣೆ ಮಾಡಲು ಸೂಚಿಸಲಾಯಿತು.
- ವೈಷ್ಣವಿ ದೇವಸ್ಥಾನದ ಬಳಿ, ಮ್ಯಾನ್‌ಹೋಲ್ ಕುಸಿದದ್ದು, ಇದನ್ನು ಕೂಡಲೇ ಸರಿಪಡಿಸಲು ಸೂಚಿಸಲಾಯಿತು.
- ಸಿ ಬ್ಲಾಕ್‌ನಲ್ಲಿ ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸಲಾಗಿದ್ದು, ರಸ್ತೆ ಅಗೆತಗಳನ್ನು ದಿ: 07.04.2022 ರಂದು ಹಾಗೂ ಮಾರುತಿ ಬಡಾವಣೆಯಲ್ಲಿ ದಿ: 12.04.2022 ರಂದು ರೆಸ್ಟೋರ್ ಮಾಡಿ ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.
- ರಾಮಮೋಹನ್‌ಪುರ 2ನೇ ಅಡ್ಡರಸ್ತೆಯಲ್ಲಿ ಡೆಬ್ರಿಸ್ ತೆರವುಗೊಳಿಸಲು ಸೂಚಿಸಲಾಗಿರುತ್ತದೆ.

ಆರೋಗ್ಯ ಇಲಾಖೆ :

- ಡಿ ಬ್ಲಾಕ್ ಹಾಗೂ ಸಿ ಬ್ಲಾಕ್‌ನಲ್ಲಿ ಪೌರಕಾರ್ಮಿಕರು ಸಾರ್ವಜನಿಕರೊಂದಿಗೆ ವಿನಯದಿಂದ ವರ್ತಿಸುವಂತೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.
- ಪೊಂಬೇಗೌಡ ಕಾಲೇಜು ಹಿಂಭಾಗದಲ್ಲಿ ಕಸ ತೆರವುಗೊಳಿಸಲು ಸೂಚಿಸಲಾಯಿತು.
- ಪೌರಕಾರ್ಮಿಕರನ್ನು ಅವರು ಸದರಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳಿಂದ ಬೇರೆ ರಸ್ತೆಗಳಿಗೆ ನಿಯೋಜಿಸಲು ಸೂಚಿಸಲಾಯಿತು.

ಆರೋಗ್ಯ ಇಲಾಖೆ:

- 1ನೇ ಮುಖ್ಯರಸ್ತೆ ಡಿ ಬ್ಲಾಕ್‌ನಲ್ಲಿ ಚರಂಡಿಗೆ ಸ್ಯಾನಿಟರಿ ಬಿಟ್ಟಿರುವ ಹೋಟೆಲ್‌ಗೆ ನೋಟಿಸ್ ನೀಡಲು ಸೂಚಿಸಲಾಯಿತು.
- ಮಾಲ್ಗುಡಿಸ್ ಹೋಟೆಲ್‌ನ ಸ್ವಚ್ಚತೆ ಬಗ್ಗೆ ಪರಿವೀಕ್ಷಣೆ ಮಾಡಲು ತಿಳಿಸಲಾಯಿತು.

ಮಾರ್ಷಲ್‌ರವರು:

- ರೈಲ್ವೆ ಸಮನಾಂತರ ರಸ್ತೆಯಲ್ಲಿ ಕೋಳಿ ಕಸ ಇಡುವವರ ಬಗ್ಗೆ ರಾತ್ರಿ ಗಸ್ತು ತಿರುಗಿ ಕ್ರಮ ವಹಿಸಲು ಸೂಚಿಸಲಾಯಿತು.

**ಪಶುಸಂಗೋಪನಾ ಇಲಾಖೆ**

- ಕೋಳಿ ಅಂಗಡಿಗಳ ಕಸವನ್ನು ತೆರವುಗೊಳಿಸಲು ಪ್ರತ್ಯೇಕ ವಾಹನವನ್ನು ಅಂಗಡಿಗಳು ವ್ಯವಸ್ಥೆ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ.
- ಮಾಂಸ ಹಾಗೂ ಕೋಳಿ ಕಸದ ಬಗ್ಗೆ ಮೀಟ್ ಗ್ರಿಡ್ ಎಂಬ ಸಂಸ್ಥೆಯು ಸರ್ವೆ ಮಾಡುತ್ತಿದೆ ಎಂದು ಪರಿವೀಕ್ಷಕರು ತಿಳಿಸಿರುತ್ತಾರೆ.
- ಮೀನಿನ ಅಂಗಡಿಗಳ ಸ್ವಚ್ಛತೆ ಬಗ್ಗೆ ತಪಾಸಣೆ ನಡೆಸಲು ಸಭೆಯಲ್ಲಿ ಸೂಚಿಸಲಾಯಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,**
**ಸಹಾಯಕ ಅಭಿಯಂತರರು, ವಾರ್ಡ್–76**
**ಗಾಯತ್ರಿನಗರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ**

**ಅಧ್ಯಕ್ಷರು**
**ನೋಡಲ್ ಅಧಿಕಾರಿಗಳು, ವಾರ್ಡ್–76**
**ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**